ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಹಾಗಾದರೆ ಅಂಥವರು ರಾಜಕೀಯ ನಿವೃತ್ತಿಯಾಗಿ ರಾಜೀನಾಮೆ ಕೊಡಲಿ. ಸಿ.ಬಿ.ಐ ತನಿಖೆ ಆಗಲಿ, ಸಿ.ಬಿ.ಐ ತನಿಖೆ ಆಗಲು ಒಪ್ಪಿಕೊಳ್ಳಲಿ. ಇವತ್ತು ಏನಾದರೂ...

(ಗೊಂದಲ)

ಅಧ್ಯಕ್ಷರು:– ನಾನು ಕಾರ್ಯಕಲಾಪವನ್ನು ನಡೆಸಬೇಕು. ದಯವಿಟ್ಟು ತಾವು ಅಲ್ಲಿ ಆದರೂ ಇರಿ. ಇಲ್ಲಿಯಾದರೂ ಇರಿ.

(ಗೊಂದಲ)

ಅಧ್ಯಕ್ಷರು:– ವರದಿಗಳನ್ನೋಪ್ಪಿಸುವುದು

3. ವರದಿಯನ್ನೊಪ್ಪಿಸುವುದು

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಅಧ್ಯಕ್ಷರು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ):– ಮಾನ್ಯ ಅಧ್ಯಕ್ಷರೆ 2013–14ನೇ ಸಾಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಎರಡನೇ ವರದಿಯನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ವರದಿಯನ್ನು ಒಪ್ಪಿಸಲಾಯಿತು.

(ಈ ಹಂತದಲ್ಲಿ ಡಿ–ನೋಟಿಫಿಕೇಷನ್ ಮಾಡಿದ ಸರ್ಕಾರಕ್ಕೆ ಧಿಕ್ಕಾರ, ಧಿಕ್ಕಾರ ಎಂದು ಬಿ.ಜೆ.ಪಿ ಸದಸ್ಯರುಗಳು ಘೋಷಣೆಯನ್ನು ಕೂಗುತ್ತಿದ್ದರು.)

ಶ್ರೀ ಕೆ.ಬಿ. ಕೋಳಿವಾಡ್ (ಅಧ್ಯಕ್ಷರು, ಹಕ್ಕುಬಾಧ್ಯತಾ ಸಮಿತಿ):– ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷನಾದ ನಾನು 2013–14ನೇ ಸಾಲಿನ ಹಕ್ಕಬಾಧ್ಯತಾ ಸಮಿತಿಯ ಎರಡನೇ ಮತ್ತು ಮೂರನೇ ವರದಿಯನ್ನು ತಮ್ಮ ಅನುಮತಿಯೊಂದಿಗೆ ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು:– ವರದಿಯನ್ನು ಒಪ್ಪಿಸಲಾಗಿದೆ.